# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 226 | Pages. 2 | Date: 19-07-2025, SATURDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 226 - ಪುಟಗಳು : 2 - 19 ಜುಲೈ 2025 ಶನಿವಾರ | Ph: 8762954248 | ದರ : ₹1


# ಜಾಹೀರಾತು ಕಮಾನು ಟೆಂಡರ್: ಪರಿಶೀಲಿಸಿ ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಮುಖ್ಯ ರಸ್ತೆಯಲ್ಲಿ ಜಾಹಿರಾತು ಕಮಾನು ಟೆಂಡರ್ ಅನ್ನು 15 ವರ್ಷಗಳ ವರೆಗೆ ಒಬ್ಬರಿಗೆ ಕೊಟ್ಟಿದ್ದರೆ ಅದನ್ನು ಪರಿಶೀಲಿಸಿ ರದ್ದುಪಡಿಸಲಾಗುವುದು ಎಂದು ಪಾಲಿಕೆ ಮೇಯರ್ ಎಂ. ಚಂದ್ರೇಗೌಡ ಭರವಸೆ ನೀಡಿದರು.



ಮಹಾನಗರ ಪಾಲಿಕೆ ಕುವೆಂಪು ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಯಾರಿಗೆ ಟೆಂಡರ್ ಆಗಿದೆ ಎಷ್ಟು ವರ್ಷಕ್ಕೆ ಎಂಬುದರ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ. ಈ ಸಂಬಂಧ ಎರಡು ದಿನಗಳಲ್ಲಿ ಕ್ರಮ ಜರುಗಿಸಲಾಗುವುದು ಎಂದು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು.

ನಗರದಲ್ಲಿ ಬ್ಯಾನರ್, ಫ್ಲೆಕ್ಸ್‌ಗಳ ಹಾವಳಿ ಹೆಚ್ಚಾಗಿದ್ದು ಕೂಡಲೇ ಕಠಿಣ ಕ್ರಮ ಕೈಗೊಳ್ಳಲಾಗುವುದು. ವಿದ್ಯುತ್ ದೀಪ, ಚರಂಡಿ ಸಮಸ್ಯೆಗೆ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಶಾಸಕ ಹೆಚ್.ಪಿ. ಸ್ವರೂಪ್ ಮಾತನಾಡಿ, ನಗರದ ಹೊಸ ಬಸ್ ನಿಲ್ದಾಣ ಎದುರುಗಡೆಯ ಬೀದಿ ಬದಿ ಕ್ಯಾಂಟೀನ್ ವ್ಯಾಪಾರಿಗಳನ್ನು ತೆರವುಗೊಳಿಸುವುದಾದರೆ ಸಹ್ಯಾದ್ರಿ ವೃತ್ತ ಹಾಗೂ ಜಿಲ್ಲಾ ಕ್ರೀಡಾಂಗಣ ಸಮೀಪದ ಅಂಗಡಿಗಳನ್ನು ಎತ್ತಂಗಡಿ ಮಾಡಬೇಕಾಗುತ್ತದೆ. ವೈಯಕ್ತಿಕ ಕಾರಣಕ್ಕೆ ಬಡವರ ಹೊಟ್ಟೆ ಮೇಲೆ ಹೊಡೆಯುವುದು ಬೇಡ ಎಂಬ ಕಾರಣಕ್ಕೆ ಸುಮ್ಮನಿದ್ದೇನೆಂದು ಆಕ್ರೋಶ ವ್ಯಕ್ತಪಡಿಸಿದರು.

ಹೊಟ್ಟೆಪಾಡಿಗಾಗಿ ಬಡವರು ಏನೋ ಮಾಡಿಕೊಂಡಿದ್ದಾರೆ. ಅಂತವರ ಹೊಟ್ಟೆ ಮೇಲೆ ಹೊಡೆಯುವುದು ಬೇಡ. ಹಾಗೆ ಮಾಡುವುದಾದರೆ ಸಹ್ಯಾದ್ರಿ ವೃತ್ತದಲ್ಲಿನ ಕ್ಯಾಂಟೀನ್‌ಗಳನ್ನು ತೆರವುಗೊಳಿಸಲೇಬೇಕಾಗುತ್ತದೆ. ಅಲ್ಲಿ ಪಾದಚಾರಿ ಮಾರ್ಗ ಒತ್ತುವರಿ ಮಾಡಲಾಗಿದೆ. ಆ ರೀತಿ ಫುಡ್ ಕೋರ್ಟ್ ನಿರ್ಮಾಣ ಮಾಡಲು ಅನುಮತಿ ಕೊಟ್ಟಿದ್ದು ಯಾರು. ಚರ್ಚೆ ಮಾಡಲು ಕುಳಿತರೆ ವಿಷಯ ಎಲ್ಲೆಲ್ಲಿಗೋ ಹೋಗುತ್ತದೆ. ಎಂಜಿ ರಸ್ತೆ, ಸಹ್ಯಾದ್ರಿ ವೃತ್ತದಲ್ಲಿನ ಬೀದಿ ಬದಿ ವ್ಯಾಪಾರಿಗಳು ಪಾಲಿಕೆಗೆ ತೆರಿಗೆ ಕಟ್ಟುತ್ತಿದ್ದಾರಾ. ಅವರಿಗೆ ಜಾಗ, ನೀರು, ಸ್ವಚ್ಛತಾ ವಾಹನಗಳನ್ನು ಮಹಾನಗರ ಪಾಲಿಕೆ ಕೊಡುತ್ತದೆ. ಆದರೆ ತೆರಿಗೆ ಮಾತ್ರ ಯಾರದೋ ಪಾಲಾಗುತ್ತಿದೆ ಎಂದು ಪ್ರಶ್ನಿಸಿದರು.

### ಕಚೇರಿ ಒಬ್ಬರಿಗೆ ಏಕೆ

25ನೇ ವಾರ್ಡ್ ಕಸ್ತೂರ ಬಾ ರಸ್ತೆಯಲ್ಲಿ ಪಾಲಿಕೆ ಸದಸ್ಯರು ವಾರ್ಡ್ ಕಚೇರಿ ಮಾಡಿಕೊಂಡಿದ್ದಾರೆ. ಅವರಿಗೊಬ್ಬರಿಗೆ ಮಾತ್ರ ಕಚೇರಿ ನೀಡಿರುವುದರ ಉದ್ದೇಶ ಗೊತ್ತಾಗುತ್ತಿಲ್ಲ. ಅಲ್ಲಿ ಸಾರ್ವಜನಿಕರ ಸಮಸ್ಯೆ ಕೇಳುತ್ತಿಲ್ಲ. ಬದಲಿಗೆ ಮಳಿಗೆ ಮಾಡಿಕೊಂಡಿದ್ದಾರೆ. ಪಾಲಿಕೆ ಅಧಿಕಾರಿಗಳು ಇದನ್ನು ಗಮನಿಸಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು. ಪಾಲಿಕೆಯಿಂದ ವಾರ್ಡ್‌ಗೊಂದು ಕಚೇರಿ ನೀಡುವುದಾದರೆ ನಮಗೂ ಕೊಡಲಿ ಎಂದು ಉಳಿದ ಸದಸ್ಯರು ಆಗ್ರಹಿಸಿದರು.

### ಬೀದಿ ಬದಿ ಅಂಗಡಿ ತೆರವುಗೊಳಿಸಿ

ಬಿಜೆಪಿ ಸದಸ್ಯ ಮೋಹನ್ ಮಾತನಾಡಿ, ಬಸ್ ನಿಲ್ದಾಣ ಎದುರಿಗೆ ಫುಡ್‌ಕೋರ್ಟ್ ನಿರ್ಮಿಸಿಕೊಡುವುದಾಗಿ ಶಾಸಕರು ಹೇಳಿದ್ದಾರೆ. ಅವರು ಹೇಳಿದಂತೆ ಕೆಲಸ ಮಾಡಿದರೆ ನಮಗೆ ಬೇಜಾರಿಲ್ಲ. ಆದರೆ ಈಗ ರಸ್ತೆಗೆ ತಳ್ಳುವ ಗಾಡಿಗಳನ್ನಿಟ್ಟುಕೊಂಡಿರುವುದರಿಂದ ಟ್ರಾಫಿಕ್ ಜಾಂ ಉಂಟಾಗುತ್ತಿದೆ. ಅವುಗಳನ್ನು ತೆರವು ಮಾಡಬೇಕೆಂದು ಆಗ್ರಹಿಸಿದರು.

ಸದಸ್ಯ ಗಿರೀಶ್ ಚನ್ನವೀರಪ್ಪ ಮಾತನಾಡಿ, ಮಾಜಿ ಶಾಸಕ ಹೆಚ್.ಎಸ್. ಪ್ರಕಾಶ್, ನಗರಸಭೆ ಅಧ್ಯಕ್ಷರಾಗಿದ್ದ ಜ್ವಾಲಣಯ್ಯ ಅವರು ಸರ್ವರ ಏಳಿಗೆ ಹಿತದೃಷ್ಟಿಯಿಂದ ಎಲ್ಲಾ ಸಮುದಾಯದವರಿಗೆ ಜಾಗ ಮಂಜೂರು ಮಾಡಿದ್ದರು. ಆದರೆ ಬಹುತೇಕ ಸಮುದಾಯಗಳು ನಿವೇಶನವನ್ನು ಪಾಳು ಬಿಟ್ಟಿವೆ ಅಥವಾ ಅನ್ಯ ಉದ್ದೇಶಕ್ಕೆ ಬಾಡಿಗೆ ನೀಡಿವೆ. ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಪೌರ ಕಾರ್ಮಿಕರಿಗಾಗಿ ಜಾಗ ನೀಡಿರುವುದು ಮಾತ್ರವಲ್ಲದೆ ಕಟ್ಟಡಕ್ಕಾಗಿ ನಗರಸಭೆ 10 ಲಕ್ಷ ರೂ. ಅನುದಾನ ಸಹ ನೀಡಲಾಗಿತ್ತು. ಆದರೆ ಪೌರ ಕಾರ್ಮಿಕ ಸಂಘಟನೆಯವರು ಆ ಜಾಗವನ್ನು ತರಕಾರಿ ವ್ಯಾಪಾರಿಗಳಿಗೆ ಬಿಟ್ಟುಕೊಟ್ಟಿದ್ದಾರೆ. ಹೀಗೆ ಮಾಡುವುದರಿಂದ ಯಾವ ಪ್ರಯೋಜನ ಎಂದು ಪ್ರಶ್ನಿಸಿದರು.

27ನೇ ವಾರ್ಡ್ ಸದಸ್ಯೆ ಸುಜಾತಾ ರಮೇಶ್ ಮಾತನಾಡಿ, ಹುಣಸಿನಕೆರೆ ಬಡಾವಣೆಯಲ್ಲಿ ನಿರ್ಮಾಣವಾಗಿರುವ ಮನೆಗಳಿಗೆ ಇ-ಖಾತೆ ಮಾಡಿಕೊಡಲು ಹಿಂದೇಟು ಹಾಕುತ್ತಿದ್ದಾರೆ. ಈ ಬಗ್ಗೆ ಪ್ರತಿ ಸಭೆಯಲ್ಲಿ ಪ್ರಸ್ತಾಪಿಸಿದರೂ ಪ್ರಯೋಜನವಾಗುತ್ತಿಲ್ಲ. ಮತದಾರರು ಬಾಯಿಗೆ ಬಂದ ಹಾಗೆ ಬೈಯುತ್ತಿದ್ದಾರೆ. ಅದೇ ಬಡಾವಣೆಯ ಜಿಎಂ ಸ್ಕೂಲ್‌ಗೆ ಖಾತೆ ಮಾಡಿ ಉಳಿದವರಿಗೆ ಕೊಡದೆ ಇರಲು ಕಾರಣವೇನು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಖಾತೆ ಮಾಡಿಕೊಡಲು ಕಾನೂನು ತೊಡಕುಗಳಿದ್ದರೆ ಹಕ್ಕುಪತ್ರ ಏಕೆ ಕೊಡಬೇಕು. ಮಾಜಿ ಶಾಸಕ ಪ್ರೀತಮ್ ಗೌಡ ಅವರು ನೀಡಿದ ಹಕ್ಕುಪತ್ರಗಳಿಗೆ ಬೆಲೆ ಇಲ್ಲವೇ. ಮೊದಲೇ ಇದೆಲ್ಲವನ್ನೂ ವಿಚಾರಿಸಬೇಕಿತ್ತಲ್ಲವೇ ಎಂದು ಪ್ರಶ್ನಿಸಿದರು.

ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಮಾತನಾಡಿ, ಪ್ರಕರಣ ಲೋಕಾಯುಕ್ತ ನ್ಯಾಯಾಲಯದಲ್ಲಿರುವುದರಿಂದ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಸಾಧ್ಯವಿಲ್ಲ. ಖಾಸಗಿ ಶಾಲೆಗೆ ಖಾತೆ ಮಾಡಿಕೊಟ್ಟಿರುವ ಕುರಿತು ದಾಖಲಾತಿಗಳ ಪರಿಶೀಲಿಸಿ ಕಾನೂನು ಉಲ್ಲಂಘನೆಯಾಗಿದ್ದರೆ ಖಾತೆ ರದ್ದುಪಡಿಸಲಾಗುವುದು ಎಂದು ಭರವಸೆ ನೀಡಿದರು.

ಪಾಲಿಕೆ ಉಪಮೇಯರ್ ಹೇಮಲತಾ ಕಮಲ್‌ಕುಮಾರ್, ಎಇಇ ವೆಂಕಟೇಶ್ ಇದ್ದರು.

> ವೈಯಕ್ತಿಕ ಕಾರಣಕ್ಕೆ ಬಡವರಿಗೆ ತೊಂದರೆ ನೀಡುವುದು ಬೇಡ. ಫುಡ್ ಕೋರ್ಟ್ ಹಂಚಿಕೆಯಲ್ಲಿ ಏನೇನಾಗಿದೆ ಎಂಬುದರ ಇತಿಹಾಸ ಕೆದಕಿದರೆ ಸತ್ಯ ಬಯಲಾಗುತ್ತದೆ. ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಲ್ಲರೂ ಸೇರಿ ಕೆಲಸ ಮಾಡಬೇಕು.
>
> – ಹೆಚ್.ಪಿ. ಸ್ವರೂಪ್, ಶಾಸಕ

## ಮುಸ್ಲಿಂ ಸದಸ್ಯರ ಪ್ರತಿಭಟನೆ

ಮುಸ್ಲಿಂ ಸದಸ್ಯರ ವಾರ್ಡ್ ಅಭಿವೃದ್ಧಿಗೆ ಮಹಾನಗರ ಪಾಲಿಕೆ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಸಮುದಾಯದ ಸದಸ್ಯರು ಪ್ರತಿಭಟನೆ ನಡೆಸಿದರು.

ಅಧಿಕಾರಿಗಳು ಮುಸಲ್ಮಾನರನ್ನು ನಿರ್ಲಕ್ಷಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಬಿಜೆಪಿ ಸದಸ್ಯರು, ನಮ್ಮ ವಾರ್ಡ್‌ಗಳಲ್ಲೂ ಯಾವ ಕೆಲಸವಾಗುತ್ತಿಲ್ಲ ಎಂದು ಏರುದನಿಯಲ್ಲಿ ಕೂಗಾಡಿದರು. ಮೇಯರ್ ಚಂದ್ರೇಗೌಡ ಅವರು, ಪಾಲಿಕೆಗೆ ಧರ್ಮದ ಲೇಪನ ಬೆರೆಸುವುದು ಬೇಡ.

ಅಭಿವೃದ್ಧಿ ವಿಚಾರದಲ್ಲಿ ಜಾತಿ, ಧರ್ಮ ಮುಖ್ಯವಾಗಬಾರದು. ಎಲ್ಲರೂ ಸಹೋದದರೇ ಎಂದು ಪರಿಸ್ಥಿತಿ ತಿಳಿಗೊಳಿಸಿದರು.



# ರಾಜ್ಯ ಕಾಂಗ್ರೆಸ್‌ನಿಂದ ಉತ್ತಮ ಆಡಳಿತ: ಗೋಪಾಲಸ್ವಾಮಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ನೀಡುತ್ತಿದ್ದು ಸಾರ್ವಜನಿಕರು ನೆಮ್ಮದಿ ಜೀವನ ನಡೆಸುತ್ತಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಹೇಳಿದರು.



ತಾಲ್ಲೂಕಿನ ಶಿವಶ್ರೀ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ ಮಾಜಿ ಸಚಿವ ದಿ. ಎಚ್.ಸಿ. ಶ್ರೀಕಂಠಯ್ಯ ಅವರ 99ನೇ ಜನ್ಮ ದಿನಾಚರಣೆ ಹಾಗೂ ಭಾನುವಾರ ಚನ್ನರಾಯಪಟ್ಟಣದಲ್ಲಿ ನಡೆಯಲಿರುವ ಕಾಂಗ್ರೆಸ್ ಯುವ ಪರ್ವ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಪಕ್ಷವನ್ನು ಬಲಪಡಿಸಲು ಯುವ ಜನತೆ ಹೆಚ್ಚಾಗಿ ಕೆಲಸ ಮಾಡಬೇಕಿದೆ. ಈ ಉದ್ದೇಶದಿಂದ ತಾಲ್ಲೂಕಿನಲ್ಲಿ ಯುವ ಪರ್ವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜನರು ಈಗ ಬುದ್ಧಿವಂತರಾಗಿದ್ದಾರೆ. ರಾಜಕೀಯಕ್ಕಾಗಿ ಹೊಡೆದಾಡುವುದಿಲ್ಲ ಆದರೆ ಕೆಲಸ ಮಾಡುವವರನ್ನು ಗುರುತಿಸುತ್ತಾರೆ ಎಂದು ತಿಳಿಸಿದರು.

ಲೋಕಸಭಾ ಚುನಾವಣೆ ಸಮಯದಲ್ಲಿ ನೀಡಿದ್ದ ಭರವಸೆಯಂತೆ, ದಿಡಗ ಪಂಚಾಯಿತಿ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸರ್ಕಾರ ಅನುಮತಿ ನೀಡಿದೆ. ಸಂಸದ ಶ್ರೇಯಸ್ ಪಟೇಲ್ ಈ ಯೋಜನೆ ಮಂಜೂರಾತಿಗೆ ಹೆಚ್ಚು ಕೆಲಸ ಮಾಡಿದ್ದಾರೆ. ಯುವ ಪರ್ವ ಕಾರ್ಯಕ್ರಮದ ಪ್ರಯುಕ್ತ ಬೃಹತ ಬೈಕ್ ರ್ಯಾಲಿ ಏರ್ಪಡಿಸಲಾಗಿದೆ. ಹಿರೀಸಾವೆ ಹೋಬಳಿಯಿಂದ ಹೆಚ್ಚು ಯುವಕರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ಮಂಜೇಗೌಡ ಮಾತನಾಡಿ, ಯುವ ಪರ್ವ ಸಮಾರಂಭಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಶಾಸಕ ರಿಜ್ವಾನ್ ಅರ್ಷದ್ ಸೇರಿದಂತೆ ರಾಜ್ಯ ಮಟ್ಟದ ಕಾಂಗ್ರೆಸ್ ನಾಯಕರು ಭಾಗವಹಿಸುತ್ತಾರೆ. ರಾಜ್ಯ ಸರ್ಕಾರದ ಯೋಜನೆಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ಆಣತಿ ಆನಂದ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್. ಮಂಜುನಾಥ್ ಮಾತನಾಡಿದರು. ರಾಜ್ಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಶಾಂಕ್, ಜಿಲ್ಲಾ ಕಾರ್ಯದರ್ಶಿ ಕಿರಣ್, ಚಲನಚಿತ್ರ ನಟ ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ರಾಕೇಶಗೌಡ, ಕೆ.ಟಿ. ನಾಗರಾಜ್, ರತ್ನರಾಜ್, ಹೊನ್ನಶೇಟ್ಟಿಹಳ್ಳಿ ಮಂಜುನಾಥ, ರಾಮಣ್ಣ, ಬೊಮ್ಮೇಗೌಡ ಸೇರಿದಂತೆ ಹೋಬಳಿಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇದ್ದರು.

# ಅನುದಾನ ಪೂರ್ಣ ಪ್ರಮಾಣದಲ್ಲಿ ಖರ್ಚಾಗಲಿ: ಡಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಸ್ಎಫ್‌ಸಿ ಮತ್ತು 15ನೇ ಹಣಕಾಸಿನಲ್ಲಿ ಬಂದಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಖರ್ಚು ಮಾಡಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ನಗರ ಸ್ಥಳೀಯ ಸಂಸ್ಥೆಗಳ ಸಭೆಯಲ್ಲಿ ಮಾತನಾಡಿ, ಕೆಲಸ ಮಾಡುವುದನ್ನು ವಿಳಂಬ ಮಾಡಬಾರದು. ಹಾಗೆ ಮಾಡಿದರೆ ಸಾರ್ವಜನಿಕರಿಗೆ ತೊಂದರೆ ಆಗುತ್ತದೆ ಎಂದು ಎಚ್ಚರಿಸಿದರು.

ಐತಿಹಾಸಿಕ ಪ್ರವಾಸಿ ಸ್ಥಳವಾದ ಬೇಲೂರಿನಲ್ಲಿ ದೇವಾಲಯದ ಸುತ್ತ ಮುತ್ತ ಹಾಗೂ ಪುರಸಭೆ ವ್ಯಾಪ್ತಿಯ ರಸ್ತೆಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು. ಪ್ರತಿವಾರ ಕೆಲಸವಾರು ಪ್ರಗತಿಯನ್ನು ಪರಿಶೀಲನೆ ಮಾಡುವಂತೆ ಯೋಜನಾ ನಿರ್ದೇಶಕರಿಗೆ ನಿರ್ದೇಶನ ನೀಡಿದರಲ್ಲದೆ, ಕೆಲಸ ಮಾಡಲು ಉದಾಸೀನ ಮಾಡದಂತೆ ಸೂಚಿಸಿದರು.

ನಮ್ಮ ಕ್ಲಿನಿಕ್‌ಗೆ ಸಂಬಂಧಿಸಿ ಖರೀದಿಸುವ ವಸ್ತುಗಳ ಬಗ್ಗೆ ಸ್ಪೆಸಿಫಿಕೇಷನ್ ನೀಡುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರಿಗೆ ಪತ್ರ ಬರೆಯಲು ಸೂಚಿಸಿದರು.

ನಗರೋತ್ಥಾನ ಹಂತ 4 ಕ್ಕೆ ಸಂಬಂಧಿಸಿದಂತೆ ಒಣ ಮತ್ತು ಹಸಿ ಕಸವನ್ನು ಪ್ರತ್ಯೇಕವಾಗಿ ವಿಂಗಡಣೆ ಮಾಡಿ ಘನ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿಗೆ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜನರಿಗೆ ಒಳ್ಳೆಯ ಕೆಲಸ ಮಾಡುವ ನಿಟ್ಟಿನಲ್ಲಿ ನಿಗದಿತ ಸಮಯದಲ್ಲಿ ಗರಿಷ್ಠ ಪ್ರಮಾಣದಲ್ಲಿ ಕೆಲಸ ಮಾಡಲು ಗಮನ ಹರಿಸಬೇಕು. ನೀರಿನ ಮಾದರಿಗಳನ್ನು ಪರೀಕ್ಷೆ ಮಾಡಿಲು ಕ್ರಮ ವಹಿಸಿ, ಚರಂಡಿಗಳಲ್ಲಿ ಕುಡಿಯುವ ನೀರಿನ ಪೈಪ್‌ಗಳು ಹಾದು ಹೋಗದಂತೆ ನಿಗಾ ವಹಿಸುವುದರ ಜೊತೆಗೆ ನೀರು ಕಲುಷಿತ ಆಗದಂತೆ ಎಚ್ಚರ ವಹಿಸಿ ಎಂದು ತಿಳಿಸಿದರು.

ಪ್ಲಾಸ್ಟಿಕ್ ಬಳಕೆಯನ್ನು ತಡೆಯಲು ನಿಗಾ ವಹಿಸಬೇಕು. ಕಸಾಯಿ ಖಾನೆಗಳನ್ನು ಸರಿಯಾಗಿ ನಿರ್ವಹಣೆ ಮಾಡಿ, ರಸ್ತೆಗಳ ಗುಂಡಿ ಮುಚ್ಚಿಸಲು ಕಡ್ಡಾಯವಾಗಿ ಕ್ರಮವಹಿಸುವಂತೆ ಹೇಳಿದರು.

ಸಾರ್ವಜನಿಕರಿಗೆ ಇ-ಖಾತೆ ಮಾಡಿಕೊಡಲು ವಿಳಂಬ ಮಾಡದಂತೆ ನಿಗಾವಹಿಸಿ ಎಂದರಲ್ಲದೆ, ಆಸ್ತಿ ಸಂರಕ್ಷಣೆಗೆ, ನಾಯಿಗಳ ಸಂತಾನ ನಿಯಂತ್ರಣಕ್ಕೆ, ಹಾಗೂ ಆಹಾರ ಸುರಕ್ಷತೆಗೆ ಎಚ್ಚರವಹಿಸಿ ಎಂದು ತಿಳಿಸಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ತ್ಯಾಗರಾಜ್ ಮತ್ತಿತರರಿದ್ದರು.

# ಎಆರ್‌ಟಿಓ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ



ಸಕಲೇಶಪುರ: ಕರ್ತವ್ಯ ಲೋಪ ಎಸಗಿರುವ ಎಆರ್‌ಟಿಓ ಅವರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿ ಮಲೆನಾಡು ರಕ್ಷಣಾ ಸೇನೆಯ ವತಿಯಿಂದ ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಹೇಮಾವತಿ ಸೇತುವೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಹಳೆ ಬಸ್ ನಿಲ್ದಾಣದಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿದರು. ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಸಂಘಟನೆ ರಾಜ್ಯಾಧ್ಯಕ್ಷ ಸಾಗರ್ ಜಾನೆಕೆರೆ ಮಾತನಾಡಿ, ಸಾರ್ವಜನಿಕರಿಗೆ ಉತ್ತಮ ಸೇವೆ ನೀಡಬೇಕಾದ ಎಆರ್‌ಟಿಓ ಮಧುರಾ ಅವರು ಕಚೇರಿಯೊಳಗೆ ಮದ್ಯವರ್ತಿಯ ಹುಟ್ಟುಹಬ್ಬವನ್ನು ಸ್ವತಃ ತಮ್ಮ ಸಮ್ಮುಖದಲ್ಲಿಯೇ ಆಚರಿಸಿರುವುದು ಸರಿಯೇ. ಈ ರೀತಿಯ ಅಧಿಕಾರಿಗಳು ಸಾರ್ವಜನಿಕರಿಗೆ ನ್ಯಾಯ ಒದಗಿಸಲಾರರು. ಇಂಥವರಿಂದ ಕಚೇರಿಯ ಗೌರವ ಉಳಿಯುತ್ತದೆಯೆ ಎಂದು ಪ್ರಶ್ನಿಸಿದರು.

ಎಆರ್‌ಟಿಓ ಈಗ ಭ್ರಷ್ಟಾಚಾರದ ಗೂಡಾಗಿದ್ದು, ಅಧಿಕಾರಿಯ ಕರ್ತವ್ಯ ಲೋಪಗಳು ಸ್ಪಷ್ಟವಾಗಿವೆ. ಹುಟ್ಟುಹಬ್ಬ ಆಚರಣೆಯ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಈ ಹಿನ್ನಲೆಯಲ್ಲಿ ಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪೂರಕ ದಾಖಲೆಗಳೊಂದಿಗೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದ್ದರಿಂದ ಕೂಡಲೇ ಈ ಅಧಿಕಾರಿಯನ್ನು ಅಮಾನತ್ತು ಮಾಡಬೇಕೆಂದು ನಾವು ಒತ್ತಾಯಿಸುತ್ತೇವೆ ಎಂದು ಹೇಳಿದರು.

ಮಲೆನಾಡು ರಕ್ಷಣಾ ಸೇನೆಯ ಜಿಲ್ಲಾಧ್ಯಕ್ಷ ದರ್ಶನ್, ಉಪಾಧ್ಯಕ್ಷ ನಾಗೇಂದ್ರ, ತಾಲ್ಲೂಕು ಅಧ್ಯಕ್ಷ ಮಂಜುದೇವ್ ಹುಲ್ಲಹಳ್ಳಿ, ಚಂದ್ರು, ತೇಜಸ್, ರುತೇಶ್, ದರ್ಶನ್ ಪೂಜಾರಿ ಇತರರಿದ್ದರು.

# ಭೂಮಿ-ವಸತಿಗಾಗಿ ಬೇಲೂರಿನಲ್ಲಿ ದಸಂಸ ಬೃಹತ್ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ದಲಿತ ಕುಟುಂಬಗಳಿಗೆ ಭೂಮಿ-ವಸತಿ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಬೇಡ್ಕರ್ ವಾದ) ತಾಲ್ಲೂಕು ಘಟಕದಿಂದ ಶುಕ್ರವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ದಸಂಸ ರಾಜ್ಯ ಸಮಿತಿ ಸದಸ್ಯ ಅಂಬುಗ ಮಲ್ಲೇಶ್ ಮಾತನಾಡಿ, ಭೂಮಿ ಉಳುಮೆ ಮಾಡಿ ಬದುಕು ಕಟ್ಟಿಕೊಂಡ ಸಾವಿರಾರು ಕುಟುಂಬಗಳು ಬಗರ್ ಹುಕುಂನ 50, 53, 57 ಹಾಗು 94/ಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅಧಿಕಾರಿಗಳು, ಬಗರ್ ಹುಕುಂ ಸಮಿತಿಯವರು ಉಳ್ಳವರಿಗೆ, ರಾಜಕೀಯ ಪ್ರಭಾವಿಗಳಿಗೆ ಭೂಮಿ ನೀಡಿ ದಲಿತರ ಭೂಮಿ ಕಿತ್ತುಕೊಳ್ಳುವ ಹುನ್ನಾರ ನಡೆಸುತ್ತಿದ್ದಾರೆ. 50 ವರ್ಷಗಳಿಂದ ಉಳುಮೆ ಮಾಡಿಕೊಂಡಿರುವ ದಲಿತ ಕುಟುಂಬಗಳಿಗೆ ಜಮೀನು ನೀಡಲು ಅಧಿಕಾರಿ ವರ್ಗ ಹಿಂದೇಟು ಹಾಕುತ್ತಿದೆ ಎಂದು ಆರೋಪಿಸಿದರು.

ವಿಭಾಗಿಯ ಸಂಘಟನಾ ಸಚಾಲಕ ಲಕ್ಷ್ಮಣ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸೈದ್ಧಾಂತಿಕ ನೆಲೆಯಲ್ಲಿ ದಲಿತ ಸಂಘಟನೆ ಭೂಮಿ, ಶಿಕ್ಷಣ, ಉದ್ಯೋಗ, ಮನುಷ್ಯನ ಮೂಲಭೂತ ಅವಶ್ಯಕತೆಗಾಗಿ ನಿರಂತರ ಸಂಘರ್ಷ ನಡೆಸುತ್ತಿದೆ. 4 ದಶಕಗಳಿಂದ ದಲಿತರ ಭೂಮಿಗಾಗಿ ನಡೆಸಿದ ಹೋರಾಟದಿಂದ ದರಖಾಸ್ತು ಜಮೀನು ಮಂಜೂರು ಮಾಡುವ ಕಾಯ್ದೆ ಜಾರಿಗೆ ತಂದಿತ್ತು. 70ರ ದಶಕದಲ್ಲಿ ಪಿಟಿಸಿಎಲ್ ಕಾಯ್ದೆ ಜಾರಿಗೆ ಬಂದಿದ್ದರೂ ಜಾತಿವಾದಿಗಳ, ಅಧಿಕಾರ ಶಾಹಿ ಸರ್ಕಾರಗಳ ಕುತಂತ್ರದಿದ ಪಿಟಿಸಿಎಲ್ ಪ್ರಕರಣಗಳಲ್ಲಿ ದಲಿತರು ನ್ಯಾಯಾಲಯಕ್ಕೆ ಅಲೆಯುತ್ತಿದ್ದಾರೆ ಎಂದರು.

ಸರ್ಕಾರ ಬಗರ್ ಹುಕುಂ ಹಾಗೂ 94ಸಿನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲ ಅರ್ಹರಿಗೂ ಭೂಮಿ, ಮನೆ ಮಂಜೂರು ಮಾಡಿ ಹಕ್ಕುಪತ್ರ ವಿತರಿಸಬೇಕೆಂದು ಒತ್ತಾಯಿಸಿದರು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಕೆ. ಸುದರ್ಶನ್, ಎಸ್.ಎಂ. ರಾಜು, ಮಂಜುನಾಥ್, ಡಾ. ಹರೀಶ್, ಹೊಯ್ಸಳ, ನಿಂಗರಾಜು, ಕೃಷ್ಣಯ್ಯ, ನಿಂಗರಾಜು ಚುಂಗನಹಳ್ಳಿ, ಪ್ರವೀಣ್, ಮಲ್ಲಿಕಾರ್ಜುನ್, ಸತೀಶ್ ಮತ್ತಿತರರು ಇದ್ದರು.

# ಪ್ರಚಾರ ಕೊರತೆ: ಗ್ಯಾರಂಟಿ ಸಮಿತಿ ಸಭೆ ಬಹಿಷ್ಕಾರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಭೆಯ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡದೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ತಾಲ್ಲೂಕಿನ ಹಿರೀಸಾವೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯನ್ನು ಪದಾಧಿಕಾರಿಗಳು ಬಹಿಷ್ಕರಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಎಲ್.ಪಿ. ಪ್ರಕಾಶಗೌಡ ಅಧ್ಯಕ್ಷತೆಯಲ್ಲಿ ಸಭೆ ನಿಗದಿಯಾಗಿತ್ತು. ನಿಯಮಾನುಸಾರ ಸಭೆ ಆಯೋಜನೆ ಮಾಡಿಲ್ಲ. ಸಮರ್ಪಕ ಪ್ರಚಾರ ಮಾಡದ ಪರಿಣಾಮ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲ ಎಂದು ಆರೋಪಿಸಿ ಅವರು ನಿರ್ಗಮಿಸಿದರು.

ಬೆಳಿಗ್ಗೆ 11.30ಕ್ಕೆ ಹಿರೀಸಾವೆ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಕೊಠಡಿಯಲ್ಲಿ ಸಭೆ ಆರಂಭವಾಗಬೇಕಿತ್ತು. ಸದಸ್ಯರು ಸಮಯಕ್ಕೆ ಸರಿಯಾಗಿ ಆಗಮಿಸಿದ್ದರು. ಅಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡಿಲ್ಲವೆಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹೋಬಳಿಯಲ್ಲಿ 7 ಪಂಚಾಯಿತಿಗಳು ಇದ್ದು, ಪ್ರಚಾರ ಮಾಡಿಲ್ಲ, ಗ್ಯಾರಂಟಿ ಯೋಜನೆ ತಲುಪುದ ಜನರಿಗೆ ಮಾಹಿತಿ ನೀಡಿಲ್ಲ, ಇದು ಸರ್ಕಾರದ ಪ್ರಮುಖ ಕಾರ್ಯಕ್ರಮವಾಗಿದೆ. ಸಭೆಗೆ ಹಿರಿಯ ಅಧಿಕಾರಿಗಳು ಬಂದಿಲ್ಲ. ಕೆಲವು ಇಲಾಖೆಯವರಿಗೆ ಸಭೆಯ ಬಗ್ಗೆ ಮಾಹಿತಿ ಇಲ್ಲ. ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರುವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಭೆ ಏರ್ಪಡಿಸುವ ಬಗ್ಗೆ ತಾತ್ಸಾರ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗುವುದು ಎಂದು ಎಲ್.ಪಿ ಪ್ರಕಾಶ್ ಗೌಡ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್ ಪ್ರತಿಕ್ರಿಯಿಸಿ, ಸಭೆಯನ್ನು ಮುಂದೂಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚು ಪ್ರಚಾರ ಮಾಡಿ ಜನರಿಗೆ ತಿಳಿಸಲಾಗುವುದು ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಎ.ಆರ್. ನಾಗೇಶ್, ಪಿಎಲ್‌ಡಿಬಿ ಅಧ್ಯಕ್ಷ ಮಂಜುನಾಥ್, ಕೆಡಿಪಿ ನಾಮನಿರ್ದೇಶಿತ ಸದಸ್ಯ ಯೋಗೇಶ್, ಮುಖಂಡರಾದ ಹೆಚ್.ಎಸ್. ಶ್ರೀಧರ್, ಅಣ್ಣಪ್ಪಸ್ವಾಮಿ, ಮಂಜೇಗೌಡ, ಕಾಂತರಾಜು, ಶಶಿಧರ್ ಮತ್ತಿತರರು ಇದ್ದರು.

# ಯುವ ನಿಧಿ: 13 ಕೋಟಿ ರೂ. ವರ್ಗಾವಣೆ

## ಮತ್ತೆ 14 ಸಾವಿರ ಫಲಾನುಭವಿಗಳ ನಿರೀಕ್ಷೆ | ವಿಶೇಷ ನೋಂದಣಿ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವ ನಿಧಿಗೆ ಪ್ರಸಕ್ತ ಸಾಲಿಗೆ ಅರ್ಜಿ ಆಹ್ವಾನಿಸಿದ್ದು ಜಿಲ್ಲೆಯಲ್ಲಿ 14 ಸಾವಿರ ಅರ್ಹ ಫಲಾನುಭವಿಗಳಿದ್ದಾರೆ.

ಪದವಿ ವ್ಯಾಸಂಗ ಪೂರ್ಣಗೊಳಿಸಿದವರಿಗೆ ಪ್ರತಿ ತಿಂಗಳು 3 ಸಾವಿರ ರೂ. ಹಾಗೂ ಡಿಪ್ಲೊಮಾ ಪಾಸಾದವರಿಗೆ 1,500 ರೂ.ಗಳನ್ನು ರಾಜ್ಯ ಸರ್ಕಾರ ಕಳೆದ ಒಂದೂವರೆ ವರ್ಷಗಳಿಂದ ನೀಡುತ್ತಿದೆ. 2025ನೇ ಸಾಲಿನಲ್ಲಿ ಪದವಿ ಪೂರ್ಣಗೊಳಿಸಿದವರ ಪರೀಕ್ಷಾ ಫಲಿತಾಂಶ ಈಗಷ್ಟೇ ಪ್ರಕಟವಾಗಿದ್ದು ಯುವ ನಿಧಿಗೆ ಅರ್ಜಿ ಸಲ್ಲಿಸಲು ಅರ್ಹರು ಕಾತರರಾಗಿದ್ದಾರೆ. ಅದಕ್ಕೆ ಪೂರಕವೆಂಬಂತೆ ರಾಜ್ಯ ಸರ್ಕಾರ ಜು. 7 ರಿಂದ ಆ. 8ರ ವರೆಗೆ ವಿಶೇಷ ನೋಂದಣಿ ಅಭಿಯಾನ ಸಹ ಹಮ್ಮಿಕೊಂಡಿದೆ.

ಕಳೆದ ವರ್ಷ ಜಿಲ್ಲೆಯ 7,631 ನಿರುದ್ಯೋಗಿ ಯುವಕ ಯುವತಿಯರು ಯುವ ನಿಧಿ ಯೋಜನೆಗೆ ಅರ್ಜಿ ಸಲ್ಲಿಸಿದ್ದಾರೆ. 2025ರ ಮೇ ತಿಂಗಳಲ್ಲಿ 6,207 ಫಲಾನುಭವಿಗಳಿಗೆ 1,84,35,000 ರೂ. ಡಿಬಿಟಿ ಮೂಲಕ ಅವರ ಬ್ಯಾಂಕ್ ಖಾತೆಗೆ ಜಮೆಯಾಗಿದೆ. 2024ರ ಜನವರಿಯಿಂದ 2025ರ ಮೇ ಅಂತ್ಯದ ವರೆಗೆ ಜಿಲ್ಲೆಯಲ್ಲಿ ಒಟ್ಟು 46,672 ಫಲಾನುಭವಿಗಳಿಗೆ 13,89,75,000 ರೂ. ವರ್ಗಾವಣೆಯಾಗಿದೆ. ಫಲಾನುಭವಿ ಅರ್ಜಿ ಸಲ್ಲಿಸಿದಾಗಿನಿಂದ ಎರಡು ವರ್ಷಗಳ ವರೆಗೆ ಪ್ರತಿ ತಿಂಗಳು ಹಣ ಸಂದಾಯವಾಗಲಿದೆ.

**ಗರಿಷ್ಠ ಅರ್ಜಿಗೆ ಕ್ರಮ**

ಯುವ ನಿಧಿ ಯೋಜನೆಯಿಂದ ಅರ್ಹ ವಿದ್ಯಾರ್ಥಿಗಳು ಹೊರಗುಳಿಯಬಾರದೆಂಬ




ಉದ್ದೇಶದಿಂದ ಕಾಲೇಜುಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಲು ಮಾಹಿತಿ ನೀಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಸಂಪರ್ಕ ಸಂಖ್ಯೆ ಪಡೆದು ಅರ್ಜಿ ಹಾಕುವಂತೆ ತಿಳವಳಿಕೆ ನೀಡಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲೂ ಯೋಜನೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ.

**ಯುವ ನಿಧಿಗೆ ಯಾರು ಅರ್ಹರು**

2023, 2024 ಹಾಗು 2025ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೊಮಾ ಉತ್ತೀರ್ಣರಾಗಿರಬೇಕು. ಪರೀಕ್ಷಾ ಫಲಿತಾಂಶ ಪ್ರಕಟವಾದ 180 ದಿನಗಳ ನಂತರವೂ ಸಾರ್ವಜನಿಕ ಅಥವಾ ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡಬಾರದು. ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆದಿರಬಾರದು. ಕನಿಷ್ಠ 6 ವರ್ಷಗಳ ಕಾಲ ಕರ್ನಾಟಕದಲ್ಲೇ ವಾಸವಿರಬೇಕು. ಈ ಎಲ್ಲಾ ಅರ್ಹತೆಗಳನ್ನು ಹೊಂದಿರುವ ನಿರುದ್ಯೋಗಿ ಪದವೀಧರರು ಯುವ ನಿಧಿಗೆ ಅರ್ಹರಾಗುತ್ತಾರೆ.

**ಫಲಾನುಭವಿಗಳಿಗೆ ಮತ್ತೊಂದು ಅವಕಾಶ**

ಯುವನಿಧಿ ಫಲಾನುಭವಿಗಳಿಗೆ ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದಿಂದ ಉಚಿತ ಕೌಶಲ ತರಬೇತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದ್ದು ಅದರ ಪ್ರಯೋಜನವನ್ನು ಪಡೆಯಬಹುದಾಗಿದೆ. ಜಿಟಿಟಿಸಿ, ಕೆಜಿಟಿಟಿಐ, ಸಿಡಾಕ್, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೌಶಲಾಧಾರಿತ ತರಬೇತಿ ನೀಡಲಾಗುತ್ತಿದ್ದು ವಿದ್ಯಾರ್ಥಿಗಳಿಗೆ ಊಟ, ವಸತಿ ವ್ಯವಸ್ಥೆಯನ್ನು ಕೌಶಲ ಅಭಿವೃದ್ಧಿ ನಿಗಮದಿಂದಲೇ ಭರಿಸಲಾಗುತ್ತದೆ. ಮಾಹಿತಿಗೆ https://www.kaushakar.com/app/registration/_verify ಮೂಲಕ ನೋಂದಣಿ ಮಾಡಿಕೊಳ್ಳಬಹುದು.

**ಸ್ವಯಂ ದೃಢೀಕರಣ ಕಡ್ಡಾಯ**

ಫಲಾನುಭವಿಗಳಿಗೆ ಪ್ರತಿ ತಿಂಗಳು ನಿಯಮಿತವಾಗಿ ಯುವ ನಿಧಿ ಹಣ ಜಮೆಯಾಗಬೇಕೆಂದರೆ ಸ್ವಯಂ ದೃಢೀಕರಣ ಸಲ್ಲಿಸುವುದು ಕಡ್ಡಾಯ. ಯೋಜನೆ ಆರಂಭದಲ್ಲಿ ಪ್ರತಿ ತಿಂಗಳು ತಾನು ಯಾವ ಉದ್ಯೋಗ ಅಥವಾ ಉನ್ನತ ವ್ಯಾಸಂಗಕ್ಕೆ ಸೇರಿಲ್ಲವೆಂದು ದೃಢೀಕರಣ ಸಲ್ಲಿಸಬೇಕಿತ್ತು. ಇತ್ತೀಚೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಲ್ಲಿಸಲು ಸೂಚಿಸಲಾಗಿದೆ. ಒಂದು ವೇಳೆ ಫಲಾನುಭವಿಗಳು ಈ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿದರೆ ನಂತರದ ತಿಂಗಳ ಹಣ ಜಮೆಯಾಗುವುದಿಲ್ಲ.

ಅರ್ಜಿ ಸಲ್ಲಿಸಿಯೂ ಕೆಲವರಿಗೆ ಹಣ ಬಾರದೆ ಇರುವ ಪ್ರಕರಣಗಳಿದ್ದು ಅದಕ್ಕೆ ದಾಖಲಾತಿ ಸರಿಯಾಗಿ ಸಲ್ಲಿಸದೆ ಇರುವುದು, ಬ್ಯಾಂಕ್ ಖಾತೆಗೆ ಆಧಾರ್ ನಂಬರ್ ಜೋಡಣೆ ಆಗದೆ ಇರುವುದು ಸೇರಿ ಇತರ ಕಾರಣಗಳಿರುತ್ತವೆ. ಅಂತಹ ಅರ್ಜಿಗಳ ಪರಿಶೀಲನೆಯೂ ನಡೆಯುತ್ತಿದೆ.

# ಪ್ರಭಾವಿಗಳಿಂದ ಭೂಮಿಗಾಗಿ ಕಿರುಕುಳ: ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸರ್ಕಾರ ಮಂಜೂರು ಮಾಡಿರುವ ಜಾಗದಲ್ಲಿ ಕೃಷಿ ಚಟುವಟಿಕೆ ನಡೆಸಲು ಪ್ರಭಾವಿಗಳು ಇಲ್ಲಸಲ್ಲದ ಕಿರುಕುಳ ನೀಡುತ್ತಿದ್ದಾರೆ ಎಂದು ತಾಲ್ಲೂಕಿನ ಜಂಬರಡಿ ಗ್ರಾಮದ ರೈತ ಶಿವರಾಜ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ರಾಮದ ಸರ್ವೆ ನಂ. 209ರ ಪೈಕಿ ದುರಸ್ತಾಗಿ ಹೊಸ ಸರ್ವೆ ನಂ. 300ರಲ್ಲಿ 4 ಎಕರೆ ಜಮೀನು ಈರಯ್ಯ ಅವರಿಗೆ ಮಂಜೂರಾಗಿದೆ. ಭೂಮಿ ಮಂಜೂರಾದ ದಿನದಿಂದಲೂ ಸುತ್ತಲೂ ಬೇಲಿ ಹಾಕಿ, ಸ್ವಚ್ಛಗೊಳಿಸಿದ್ದೇವೆ. ಹಣಕಾಸಿನ ತೊಂದರೆಯಿಂದ ಜಮೀನನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ. ಇತ್ತೀಚೆಗೆ ಕೃಷಿ ಚಟುವಟಿಕೆಗೆ ಮುಂದಾಗಿದ್ದು ಬ್ಯಾಂಕ್, ಕೈ ಹಾಗೂ ಬಡ್ಡಿ ಸಾಲ ಪಡೆದು ಕೃಷಿ ಕಾರ್ಯ ಆರಂಭಿಸಿದ್ದೇವೆ. ಆದರೆ ದಿಣ್ಣೆಕೆರೆ ಹಾಗು ಹಾದಿಗೆ ಗ್ರಾಮದ ಕೆಲವರು ನಮ್ಮ ಜಮೀನಿನಲ್ಲಿ ನಿವೇಶನ ನೀಡುತ್ತೇವೆಂದು ಸಾರ್ವಜನಿಕರಿಂದ ಹಣ ಸಂಗ್ರಹಿಸಿದ್ದಾರೆ.

ಭೂಮಿ ನಮಗೆ ಸೇರಿದ್ದರೂ ಒಕ್ಕಲೆಬ್ಬಿಸುವ ಯತ್ನ ನಡೆದಿದೆ. ಜಂಬರಡಿ ಗ್ರಾಮದಲ್ಲಿ ಗ್ರಾಮಸ್ಥರಿಗೆ ನಿವೇಶನ ನೀಡಲು ಸಾಕಷ್ಟು ಸರ್ಕಾರಿ ಜಮೀನು ಲಭ್ಯವಿದ್ದರೂ ನಮ್ಮ ಆಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ರಾಜಕೀಯ ಪ್ರಭಾವಿಗಳು ಅದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆಂದು ಆರೋಪಿಸಿದರು.

ಹುಲ್ಲೆಮನೆ ಯೋಗೇಶ್ ಮಾತನಾಡಿ, 2020ರಲ್ಲಿ ಹೆಚ್‌ಆರ್‌ಪಿ ಯೋಜನೆಯಡಿ ಕೆಲವರು ಮಂಜೂರಾತಿ ಪಡೆದು ನಮ್ಮ ಜಮೀನನ್ನು ಬಲವಂತವಾಗಿ ಪಡೆದುಕೊಳ್ಳಲು ಬೆದರಿಕೆ ಹಾಕಿದರು. ನಾವು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿ ನಮ್ಮ ಜಮೀನು ಹೆಚ್‌ಆರ್‌ಪಿಗೆ ಒಳಪಟ್ಟಿಲ್ಲ ಎಂಬ ಹಿಂಬರಹ ಪಡೆದಿದ್ದೆವು. ಈ ಸಂಬಂಧ ಎಲ್ಲಾ ದಾಖಲೆಗಳು ನಮ್ಮ ಬಳಿ ಇವೆ ಎಂದರು.

ಜಂಬರಡಿ ಗ್ರಾಮದ ಸ.ನಂ.209ರಲ್ಲಿ ಕೆಲ ಬಲಾಢ್ಯರು ತಮ್ಮ ಹಿಡುವಳಿಯಷ್ಟು ಮಾತ್ರವಲ್ಲದೆ, ಹೆಚ್ಚುವರಿ ಜಮೀನನ್ನು ಅಕ್ರಮವಾಗಿ ಸ್ವಾಧೀನ ಮಾಡಿಕೊಂಡಿದ್ದಾರೆ. ಅವರಿಗೆ ಯಾವುದೇ ಕ್ರಮ ಕೈಗೊಳ್ಳದೆ, ಕಾನೂನುಬದ್ಧವಾಗಿ ಹಕ್ಕು ಹೊಂದಿರುವ ನಮಗೆ ಒತ್ತಡ ತರುತ್ತಿರುವುದು ಏಕೆ ಎಂದು ಪ್ರಶ್ನಿಸಿದರು. ಗ್ರಾಮದ ಪ್ರಸನ್ನ, ಪ್ರವೀಣ್, ಪ್ರತಾಪ್ ಇದ್ದರು.

# ಮೌಢ್ಯದ ವಿರುದ್ಧ ಹೋರಾಡಿದ ಹಡಪದ ಅಪ್ಪಣ್ಣ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಸಮಾಜದಲ್ಲಿ ಬೇರೂರಿದ್ದ ಮೌಢ್ಯ ಹೋಗಲಾಡಿಸಲು ಹಡಪದ ಅಪ್ಪಣ್ಣ ಪಣ ತೊಟ್ಟಿದ್ದರು ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ತಾಲ್ಲೂಕು ಸವಿತಾ ಸಮಾಜ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಶಿವಶರಣ ಹಡಪದ ಅಪ್ಪಣ್ಣ ಅವರು 12ನೇ ಶತಮಾನದ ವಚನ ಚಳವಳಿ ಹಾಗೂ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದು ಬಸವಣ್ಣನವರ ಆಪ್ತ ಸಹಾಯಕರಾಗಿದ್ದರು. ಅನುಭವ ಮಂಟಪದ ಕಾರ್ಯದರ್ಶಿಯಾಗಿ 251 ವಚನ ರಚಿಸುವುದರ ಮೂಲಕ ಶರಣರಿಗಿರಬೇಕಾದ ಕಾಯಕ ನಿಷ್ಠೆ, ಭಕ್ತಿ, ಆಚಾರ, ವಿಚಾರಗಳನ್ನು ವಚನಗಳಲ್ಲಿ ಸಾಹಿತ್ಯಾಕರಿಸಿದ್ದಾರೆ ಎಂದರು.

ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ಸಾರುವುದರೊಂದಿಗೆ ಸಾಕಷ್ಟು ವಚನಗಳನ್ನು ಬರೆದ ಕೀರ್ತಿ ಹಡಪದ ಅಪ್ಪಣ್ಣನವರಿಗೆ ಸಲ್ಲುತ್ತದೆ. ಸವಿತಾ ಸಮಾಜದ ಬಗ್ಗೆ ಕೀಳರಿಮೆ ಇಂದಿಗೂ ಜೀವಂತವಾಗಿದ್ದು, ದಿನದಿಂದ ದಿನಕ್ಕೆ ಜಾತಿ ನಿಂದನೆ ಹೆಚ್ಚುತ್ತಿದೆ. ಇದರಿಂದ ಸಮುದಾಯ ಸಾಕಷ್ಟು ಮುಜುಗರ ಅನುಭವಿಸುತ್ತಿದೆ. ಸರ್ಕಾರ ಅಸ್ಪೃಶ್ಯತೆ ಶೋಷಣೆ ಅಪಮಾನಿಸುವ ಕೃತ್ಯ ಎಸಗುವ ಅನಾಗರಿಕರ ವಿರುದ್ಧ ಕಾನೂನು ಕ್ರಮ ಜರುಗಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಸಂಪನ್ಮೂಲ ವ್ಯಕ್ತಿ ಪವನ್ ಕುಮಾರ್ ಮಾತನಾಡಿ, ಕ್ಷೌರಿಕರ ಬಗ್ಗೆ ಜನರಿಗಿದ್ದ ಕೀಳರಿಮೆ ಹಾಗೂ ಮೂಢನಂಬಿಕೆಗಳನ್ನು ಹೋಗಲಾಡಿಸಲು ಬಸವಣ್ಣನವರು ಕೈಗೊಂಡ ಕ್ರಾಂತಿಕಾರಕ ಬದಲಾವಣೆಗಳಿಂದ ಇಂದು ಸಣ್ಣ ಸಣ್ಣ ಸಮಾಜಗಳು ಶೋಷಿತ ಸಮುದಾಯಗಳು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತಿದೆ ಎಂದರು.

ಸವಿತಾ ಸಮಾಜ ತಾಲ್ಲೂಕು ಅಧ್ಯಕ್ಷ ಕುಮಾರಸ್ವಾಮಿ, ಗುಲಾಂ ಸತ್ತರ್, ಡಾ. ಜಯರಾಜ್ ಮತ್ತಿತರರಿದ್ದರು.

# ಜು. 26ಕ್ಕೆ ಎಂಜಿನಿಯರಿಂಗ್ ಕಾಲೇಜು ಉದ್ಘಾಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಬಡಮಕ್ಕಳ ಶೈಕ್ಷಣಿಕ ಅನುಕೂಲಕ್ಕಾಗಿ ನಿರ್ಮಿಸಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಹಾಗು ಪಾಲಿಟೆಕ್ನಿಕ್ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಜು. 26 ರಂದು ನೆರವೇರಿಸಲಿದ್ದಾರೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ನಗರ ಹೊರವಲಯದ ಜೇನುಕಲ್ ತಾಲ್ಲೂಕು ಕ್ರೀಡಾಂಗಣದಲ್ಲಿ ಸಿಎಂ ಕಾರ್ಯಕ್ರಮಕ್ಕೆ ಬೃಹತ್ ವೇದಿಕೆ ಹಾಗೂ ಪೆಂಡಾಲ್ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಬೃಹತ್ ಕಾರ್ಯಕ್ರಮಕ್ಕೆ ಪೂರ್ವ ಸಿದ್ಧತಾ ಕಾರ್ಯ ಈಗಾಗಲೇ ಆರಂಭವಾಗಿವೆ ಎಂದರು. ತಾಲ್ಲೂಕಿನ ಜನತೆಯ ಬಹು ವರ್ಷಗಳ ಬೇಡಿಕೆ ಹಾಗೂ ನಿರೀಕ್ಷೆಯಾಗಿದ್ದ ಸ್ಥಳೀಯವಾಗಿಯೇ ತಾಂತ್ರಿಕ ಶಿಕ್ಷಣ ಕಲಿತು ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಇದು ಸಹಕಾರಿಯಾಗಲಿದೆ. ವಿವಿಧ ಇಲಾಖೆಗಳ ಸಚಿವರು ನೂತನ ಕಾಲೇಜು ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಹಾಗೂ ಉದ್ಘಾಟನೆ ಮಾಡಲಿದ್ದಾರೆ ಎಂದು ಹೇಳಿದರು.



ಹಕ್ಕುಪತ್ರ ವಿತರಣೆ: ಹೌಸಿಂಗ್ ಫಾರ್ ಆಲ್ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಪೈಕಿ 300 ಫಲಾನುಭವಿಗಳಿಗೂ ಸಿಎಂ ಹಾಗೂ ಸಚಿವರ ಮೂಲಕ ಹಕ್ಕುಪತ್ರ ವಿತರಣೆ ಮಾಡಲಾಗುವುದು ಎಂದು ಶಾಸಕರು ತಿಳಿಸಿದರು.

ಈಜುಕೊಳ: ನಗರಸಭೆ ವತಿಯಿಂದ ಕಂತೇನಹಳ್ಳಿ ಪಾರ್ಕ್‌ಗೆ ಹೊಂದಿಕೊಂಡಿರುವ ಕೆರೆ ಅಂಗಳದಲ್ಲಿ ನಿರ್ಮಾಣಗೊಂಡಿರುವ ಈಜುಕೊಳ ಸಹ ಅಂದೇ ಲೋಕಾರ್ಪಣೆಗೊಳ್ಳಲಿದೆ. ಇಲ್ಲೂ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಒಲಂಪಿಕ್ ಕ್ರೀಡೆಗಳನ್ನು ನಡೆಸಬಹುದು ಎಂದರು.

ಅದೇ ರೀತಿ ನಗರದ ಸಂತೆ ಮೈದಾನದಲ್ಲಿ ನಗರಸಭೆಯಿಂದ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣಗಳೂ ಉದ್ಘಾಟನೆಗೊಳ್ಳಲಿವೆ ಎಂದ ಶಾಸಕರು ಇದೇ ರೀತಿ ನೂರಾರು ಕೋಟಿ ವೆಚ್ಚದ ಹತ್ತು ಹಲವು ನೂತನ ಕಾಮಗಾರಿಗಳಿಗೆ ಅಂದೇ ಚಾಲನೆ ದೊರೆಯಲಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೆ ನಗರ ಹಾಗೂ ತಾಲ್ಲೂಕಿನಿಂದ 50 ಸಾವಿರ ಜನ ಸೇರಲಿದ್ದಾರೆ. ಎಲ್ಲರ ಸಹಕಾರದಿಂದ ನಾಡಿನ ಸಿಎಂ ಹಾಗೂ ಮಂತ್ರಿಗಳನ್ನು ಶಿಷ್ಟಾಚಾರದಂತೆ ಸ್ವಾಗತಿ ಯಶಸ್ವಿ ಕಾರ್ಯಕ್ರಮ ನಡೆಸಲು ಯೋಜಿಸಲಾಗಿದೆ ಎಂದರು.

20 ಕೋಟಿ ರೂ. ವೆಚ್ಚದಲ್ಲಿ ಪಾಲಿಟೆಕ್ನಿಕ್ ಹಾಗೂ 70 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತವಾದ ಕಾಲೇಜು ಸ್ಥಾಪನೆ ಆಗಿದೆ. ಎಲ್ಲ ಮಕ್ಕಳು, ಪೋಷಕರು ಇದರ ಸದುಯೋಗ ಪಡೆದುಕೊಳ್ಳಬೇಕು. ಮುಂದಿನ ದಿನಗಳಲ್ಲಿ ಕ್ಷೇತ್ರವನ್ನು ಮಾದರಿಯಾಗಿ ಮಾಡಲು ಶ್ರಮಿಸಲಾಗುವುದು ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಸಮೀವುಲ್ಲಾ, ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ಸದಸ್ಯರಾದ ವೆಂಕಟಮುನಿ, ಯೂನಸ್, ದರ್ಶನ್ ಜಾಕೀರ್, ನಾಮ ನಿರ್ದೇಶನ ಸದಸ್ಯರಾದ ಕಿರಣ್, ಭಾರತಿ, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಣಾವರ ಶ್ರೀನಿವಾಸ್, ಕಾಂಗ್ರೆಸ್ ಹಿರಿಯ ಮುಖಂಡ ಶಶಿಧರ್, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್, ತಾಪಂ ಮಾಜಿ ಅಧ್ಯಕ್ಷ ಹಾರನಹಳ್ಳಿ ಶಿವಮೂರ್ತಿ, ಮಂಜುಳಾ ಬಾಯಿ ಚಂದ್ರನಾಯ್ಕ, ಮುಖಂಡರಾದ ಮಂಜುರಾಜ್, ಮಲ್ಲೇಶಣ್ಣ ಇದ್ದರು.

# ಏಕ್ ಭಾರತ್ ಶ್ರೇಷ್ಠ ಭಾರತ್ ಶಿಬಿರ ಯಶಸ್ವಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಎನ್‌ಸಿಸಿ ಹಾಸನ 15ನೇ ಬೇಟಾಲಿಯನ್ ವತಿಯಿಂದ ನಡೆದ ‘ಏಕ್ ಭಾರತ್ ಶ್ರೇಷ್ಠ ಭಾರತ್ 01’ ಶಿಬಿರ ಜು 4 ರಿಂದ 15ರ ವರೆಗೆ ನಗರದಲ್ಲಿ ಆಯೋಜಿಸಲಾಗಿತ್ತು.

ಈ ಕ್ಯಾಂಪ್ ನಲ್ಲಿ ಮಧ್ಯಪ್ರದೇಶ, ಛತ್ತೀಸಗಡ ಕರ್ನಾಟಕ ಮತ್ತು ಗೋವಾ ಡೈರೆಕ್ಟರ್ಸ್‌ನ 600 ಕೆಡೆಟ್‌ಗಳು ಮತ್ತು 9 ಎಎನ್‌ಓಗಳು ಭಾಗವಹಿದ್ದರು. ಈ ಕ್ಯಾಂಪ್‌ಗೆ ಕರ್ನಾಟಕ ಮತ್ತು ಗೋವಾ ಡೈರೆಕ್ಟರ್‌ನ ಡೆಪ್ಯುಟಿ ಡೈರೆಕ್ಟರ್ ಜನರಲ್ ಏರ್ ಕಮಾಂಡರ್ ಬಿ.ಎನ್. ಅರುಣ್ ಕುಮಾರ್ ಅವರು ಭೇಟಿ ನೀಡಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪ್ರತ್ಯಕ್ಷದರ್ಶಿಯಾದರು. ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

ಮೈಸೂರಿನ ಗ್ರೂಪ್ ಕಮಾಂಡರ್ ಕರ್ನಲ್ ರೋಹಿತ್ ಠಾಕೂರ್ ಹಾಗೂ 15ನೇ ಕರ್ನಾಟಕ ಬೇಟಾಲಿಯನ್ ಎನ್‌ಸಿಸಿ ಹಾಸನದ ಕಮಾಂಡಿಂಗ್ ಆಫೀಸರ್ ಆಗಿರುವ ಲೆಫ್ಟಿನೆಂಟ್ ಕರ್ನಲ್ ಮನದಿಪ್ ಸಿಂಗ್ ಸೇಖಾಲ್ ಅವರು ಕ್ಯಾಂಪ್ ಬಗ್ಗೆ ಪರಿಚಾತ್ಮಕ ವಿವರಣೆ ನೀಡಿದರು.

# ತಂತಿ ನಾಟಕ ಪ್ರದರ್ಶನ ಜು. 25ಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಂಗ ಹೃದಯ ಕಲಾ ತಂಡದಿಂದ ರಾಜೇಂದ್ರ ಕಾರಂತರ ‘ತಂತಿ’ ನಾಟಕ ಪ್ರದರ್ಶನವನ್ನು ಜು. 25ರ ಶುಕ್ರವಾರ ಸಂಜೆ 4 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏರ್ಪಡಿಸಲಾಗಿದೆ.

ನಿರ್ದೇಶಕ ಕೆ.ವಿ. ಅಜೇಯ ಸಿಂಹ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡುವರು. ಕಲಾವಿದರಾದ ಪೂಜಾ ರಘುನಂದನ್, ಗುರುರಾಜ್ ಹುಲಿಕಲ್, ಪ್ರದೀಪ್, ಯದೀಶ್, ಜಗದೀಶ್, ಚಂದನ್




ಚರ್ಚಿಲ್, ಮಮತಾ ಮಂಜುನಾಥ್ ಮತ್ತಿತರರು ಅಭಿನಯಿಸಿದ್ದಾರೆ.

ರಂಗಭೂಮಿ ಬದ್ಧತೆ ಮತ್ತು ಕಲಾ ಪ್ರಸಾರಕ್ಕೆ ಹೆಸರಾಗಿರುವ ರಂಗ ಹೃದಯ ತಂಡದ ನೂತನ ಪ್ರಯೋಗ ‘ತಂತಿ’ ಈಗಾಗಲೇ ಹಲವು ಜಿಲ್ಲೆಗಳಲ್ಲಿ ಪ್ರದರ್ಶನ ಕಂಡು ಜನಮೆಚ್ಚುಗೆ ಪಡೆದಿದೆ.

ಸಂಬಂಧಗಳ ಸೂಕ್ಷ್ಮ ಎಳೆ ಮತ್ತು ನಿತ್ಯ ಬದುಕಿನಲ್ಲಿ ಎದುರಾಗುವ ಸಾರ್ವತ್ರಿಕ ಕಥಾಹಂದರವನ್ನು ನಾಟಕ ಒಳಗೊಂಡಿದೆ. ನಾಟಕದ ಪ್ರಚಾರ ಕಾರ್ಯವನ್ನು ಸಾಹಿತಿ ಚಲಂ ಹಾಡ್ಲಹಳ್ಳಿ ನಿರ್ವಹಿಸಲಿದ್ದಾರೆ.

ರಂಗ ಹೃದಯ ತಂಡವು ಕಳೆದ ಎಂಟು ವರ್ಷಗಳಿಂದ ಹಾಸನದಲ್ಲಿ ನಾಟಕ ಪ್ರದರ್ಶನ ಹಮ್ಮಿಕೊಳ್ಳುತ್ತಾ ಬಂದಿದೆ. ‘ಒಂದು ಶಹರದ ಸುತ್ತ’, ‘ನಿಲುವಂಗಿ ಕನಸು’, ‘ಆಷಾಢದ ಒಂದು ದಿನ’ ಸೇರಿ ಹಲವು ನಾಟಕ ಪ್ರದರ್ಶಿಸಿದೆ.

# ಎಫ್‌ಡಿಎ ಮನೆಯಲ್ಲಿ ಚಿನ್ನಾಭರಣ ಕಳವು

ಹಾಸನ: ಮನೆ ಮುಂದೆ ಬಿಟ್ಟಿದ್ದ ಶೂ ಒಳಗಿಟ್ಟಿದ್ದ ಕೀ ಬಳಸಿ ಒಳ ಪ್ರವೇಶಿಸಿರುವ ಕಳ್ಳರು ನಗದು ಸೇರಿ 3.70 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಗರದ ಚನ್ನಪಟ್ಟಣ ಬಡಾವಣೆಯಲ್ಲಿ ಬುಧವಾರ ನಡೆದಿದೆ. ಜಿಲ್ಲಾ ನ್ಯಾಯಾಲಯದ ಅಭಿಯೋಜಕರ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿರುವ ಶಿಲ್ಪ ಅವರ ಮನೆಯಲ್ಲಿ ಕಳ್ಳತನವಾಗಿದೆ. ಎಂದಿನಂತೆ ಮನೆ ಬಾಗಿಲಿಗೆ ಬೀಗ ಹಾಕಿ ಚಪ್ಪಲಿ ಸ್ಟ್ಯಾಂಡ್‌ನ ಶೂ ಒಳಗೆ ಕೀ ಇಟ್ಟು ತೆರಳಿದ್ದ ಅವರು ಕೆಲಸ ಮುಗಿಸಿ ಮನೆಗೆ ಬಂದಾಗ ಕಳುವಾಗಿರುವ ವಿಚಾರ ತಿಳಿದಿದೆ. ಬೀರುವಿನಲ್ಲಿಟ್ಟಿದ್ದ 14 ಗ್ರಾಂ ತೂಕದ ಚಿನ್ನದ ನೆಕ್ಲೆಸ್, 15 ಗ್ರಾಂ ತೂಕದ ಒಂದು ಚಿನ್ನದ ನೆಕ್ಲೆಸ್, 14 ಗ್ರಾಂ ತೂಕದ ಒಂದು ಜೊತೆ ಜುಮುಕಿ ಮತ್ತು 26 ಸಾವಿರ ರೂ. ನಗದು ಕದ್ದಿದ್ದಾರೆ. ಕಳ್ಳತನದ ಬಳಿಕ ಖದೀಮರು ಮನೆ ಬೀಗ ಹಾಕಿಕೊಂಡು ಹೋಗಿದ್ದಾರೆ. ಮತ್ತೊಂದು ಕೀ ಸಹಾಯದಿಂದ ಶಿಲ್ಪ ಅವರು ಬಾಗಿಲು ತೆರೆದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-19

1848: ಮಹಿಳಾ ಹಕ್ಕುಗಳ ಬಗ್ಗೆ ಮೊದಲ ಪ್ರಾಂತೀಯ ಸಮಾವೇಶ ಸೆನೆಕಾ ಫಾಲ್ಸ್‌ನಲ್ಲಿ (ನ್ಯೂಯಾರ್ಕ್, ಅಮೆರಿಕಾ) ನಡೆಯಿತು. ಇದನ್ನು ಅಮೆರಿಕದ ಮಹಿಳಾ ಹಕ್ಕು ಚಳವಳಿಯ ಉದ್ಭವವಾಗಿ ಪರಿಗಣಿಸಲಾಗುತ್ತದೆ.

1870: ಫ್ರಾನ್ಕೋ-ಪ್ರಶಿಯನ್ ಯುದ್ಧ ಆರಂಭವಾಯಿತು. ಇದು ಫ್ರಾನ್ಸ್ ಮತ್ತು ಜರ್ಮನ್ ರಾಜ್ಯಗಳ ನಡುವೆ ನಡೆದ ಮಹತ್ವದ ಯುದ್ಧವಾಗಿತ್ತು.

1903: ಫೋರ್ಡ್ ಮೋಟಾರ್ ಕಂಪನಿ ತನ್ನ ಮೊದಲ ಕಾರು ಮಾರಾಟ ಮಾಡಿತು.

1980: ಮೋಸ್ಕೋದಲ್ಲಿ ಒಲಿಂಪಿಕ್ಸ್ ಆರಂಭವಾಯಿತು. ಹಲವಾರು ದೇಶಗಳು (ಅಮೆರಿಕ ಸೇರಿದಂತೆ) ಈ ಕ್ರೀಡಾಕೂಟವನ್ನು ಬಹಿಷ್ಕರಿಸಿವೆ.

**ಜನನ**

1834: ಎಡ್ಗಾರ್ ಡೇಗಾ, ಪ್ರಸಿದ್ಧ ಫ್ರೆಂಚ್ ಚಿತ್ರಕಾರ.

1865: ಚಾರ್ಲ್ಸ್ ಹೊರ್, ಇಂಗ್ಲೆಂಡ್‌ನ ಕ್ರಿಕೆಟ್ ಆಟಗಾರ.

1961: ಅಬ್ದುಲ್ಲಾ , ಜೋರ್ಡಾನ್ ರಾಜ.

**ಮರಣ**

2002: ಅಲಾನ್ ಲೋಮಾಕ್ಸ್, ಅಮೆರಿಕದ ಪ್ರಸಿದ್ಧ ಸಂಗ್ರಹಕ ಮತ್ತು ಸಂಗೀತ ಜ್ಞಾನಿ.

2019: ಜಾನ್ ಪೌಲ್ಸ್, ಖ್ಯಾತ ಬ್ರಿಟಿಷ್ ಭೌತಶಾಸ್ತ್ರಜ್ಞ.

1992: ಭಾರತೀಯ ತತ್ವಜ್ಞಾನಿ ಜಿ.ವಿ. ಸೀತಾರಾಮಯ್ಯ.

# ಸಾವು ಸುಖ ಎಂದವರ ಮರಣ!

**– ಅರವಿಂದ ಚೊಕ್ಕಾಡಿ**

ಸ್ವಲ್ಪ ಅಡಿಕೆ ತರಲೆಂದು ಬೆಳಗ್ಗೆ ಮುಂಡಾಜೆಯ ಅನಂತ ಬಾವಯ್ಯನಲ್ಲಿಗೆ ಹೋಗಿದ್ದೆ. ಅವರು ನನಗೆ ಆಶ್ಚರ್ಯಕ್ಕೆ ಕಾರಣವಾಗಿರುವ, ಅವರ ತಂದೆಯ ಸಾವಿನ ಸ್ಥಿತಿಯನ್ನು ಹೇಳಿದರು. ಸಾವನ್ನು ಹೀಗೂ ಸ್ವೀಕರಿಸಲು ಸಾಧ್ಯವೆ..?

ಅನಂತ ಬಾವಯ್ಯನ ತಂದೆ ಮೂಲ ಮನೆಯಲ್ಲೆ ಇದ್ದವರು. ಒಂದು ಸಲ ಬಂದಿದ್ದಾಗ, ಇನ್ನು ನಾನು ಇಲ್ಲಿಗೆ ನೆಂಟನ ಹಾಗೆ ಬಂದು ಹೋಗುವುದು. ನಿಲ್ಲಲು ಬರುವುದಿಲ್ಲ ಎಂದಿದ್ದರಂತೆ. ಒಂದು ಸಲ ಮನೆಯಲ್ಲಿ ಭಾಗವತ ಓದ್ತಾ ಇದ್ದವರು ತಕ್ಷಣ ಎದ್ದು ಅಡಿಕೆ ತೋಟಕ್ಕೆ ಹೋದರಂತೆ. ಓದನ್ನು ಅರ್ಧದಲ್ಲೆ ನಿಲ್ಲಿಸಿ ಹೋದದ್ದೇಕೆ? ಎಂದು ಪತ್ನಿ ಕೇಳಿದ್ದಕ್ಕೆ ತನಗೆ ಓದುತ್ತಾ ಇದ್ದಾಗ, ತೋಟದಲ್ಲಿ ಅಡಿಕೆ ಬಿದ್ದಿದೆ. ಅದನ್ನು ಹೆಕ್ಕುವುದು ನಿನ್ನ ಕರ್ತವ್ಯ ಪುಸ್ತಕ ಓದುವುದಲ್ಲ ಎಂದು ಮನಸ್ಸಿಗೆ ಹೇಳಿದ ಹಾಗಾಯಿತು ಎಂದಿದ್ದರಂತೆ. ಬಹುಶಃ ‘ವಾನಪ್ರಸ್ಥ’ವನ್ನು ಬದುಕಿದ



ಮನುಷ್ಯನ ಹಾಗೆ ಕಾಣುತ್ತದೆ. ವಯಸ್ಸು ಅರವತ್ತಾದಾಗ ಮಕ್ಕಳನ್ನು ಕರೆದು ಅವರಿಗೆಲ್ಲ ಜವಾಬ್ದಾರಿ ವಹಿಸಿ ತನ್ನ ಜವಾಬ್ದಾರಿ ಮತ್ತು ಅಧಿಕಾರಗಳನ್ನು ತ್ಯಜಿಸಿದರಂತೆ. ವಯಸ್ಸು ಎಪ್ಪತ್ತೈದಾದಾಗ ಅವರ ಬಳಿ ಇದ್ದ ಎಲ್ಲ ಹಣವನ್ನೂ ಬ್ಯಾಂಕಿಂದ ತೆಗೆದು ಝೀರೋ ಬ್ಯಾಲೆನ್ಸ್ ಮಾಡಿದರಂತೆ. ಆ ಮೇಲೆ ಅವರ ಮತ್ತು ಅವರ ಪತ್ನಿಯ ಉತ್ತರ ಕ್ರಿಯೆಗಾಗಿ ಇರಿಸಿದ್ದ ಫಿಕ್ಸೆಡ್ ಡೆಪಾಸಿಟ್ ಮಾತ್ರ. ಹಣವನ್ನು ಹಂಚಲು ಹೊರಟಾಗ ಮಕ್ಕಳು, ನೀವು ನಮಗೆ ಸಾಕಷ್ಟು ಮಾಡಿದ್ದೀರಿ. ನಾವು ಚೆನ್ನಾಗೇ ಇದ್ದೇವೆ. ಇದು ನಿಮ್ಮ ಹಣ. ನಮಗೆ ಬೇಡ. ಯಾರಿಗೆ ಕೊಡಬೇಕೆಂದು ನಿಮಗನಿಸುತ್ತದೊ ಅವರಿಗೆ ಹಂಚಿ ಎಂದರಂತೆ. ಆ ಮೇಲೆ ಅವರು ಹಂಚಿದರು. ಯಾರಿಗೆ ಹಂಚಿದರೆಂದು ಮಕ್ಕಳು ತಿಳಿಯಲಿಕ್ಕೂ ಹೋಗಲಿಲ್ಲ. ಆ ಮೇಲೆ ಹಣದ ಅಗತ್ಯ ಬಂದರೆ ಮಕ್ಕಳ ಬಳಿ, ಇಕೊ ಐನೂರು ರೂಪಾಯಿ ಕೊಡು ಎಂದು ಕೇಳುತ್ತಿದ್ದರಂತೆ. ನೀವು ಕೈ ಖಾಲಿ ಮಾಡಿಕೊಳ್ಳಬೇಡಿ ಎಂದು ಯಾರೋ ಹೇಳಿದ್ದಕ್ಕೆ, ನನಗೆ ನನ್ನ ಮಕ್ಕಳ ಬಳಿ ನಂಬಿಕೆ ಉಂಟು ಎಂದರಂತೆ.

ಹೀಗಿದ್ದ ವ್ಯಕ್ತಿ ಗತಿಸುವ ಕೆಲ ದಿನಗಳ ಮೊದಲು ಅನಂತ ಬಾವಯ್ಯನ ಬಳಿ, ಇಕೊ, ಇನ್ನು ನೀನು ಎರಡು ಮೂರು ದಿವಸ ನಿನ್ನ ಮನೆಯಲ್ಲಿರಲಾರದಷ್ಟು ದೂರಕ್ಕೆ ಹೋಗಬೇಡ. ನನಗೆ ಯಾವ ಕಾಯಿಲೆಗಳೂ ಇಲ್ಲ. ಆದರೆ ನನ್ನ ದೇಹ ದುರ್ಬಲ ಆಗುತ್ತಿದೆ ಎಂದು ನನಗೆ ಗೊತ್ತಾಗುತ್ತಿದೆ ಎಂದಿದ್ದರಂತೆ. ಒಂದು ಮುಂಜಾನೆ ಕಾಫಿ ಕುಡಿದು ಟಾಯ್ಲೆಟ್‌ಗೆ ಹೋಗಿ ಬಂದರಂತೆ. ಬರುವಾಗ ಸೊಸೆ, ಮೊಮ್ಮಕ್ಕಳ ಬಳಿ ಕಾಲಿನ ಪಾದ ತಂಪಾಗುತ್ತಾ ಇರುವ ಹಾಗೆ ಅನಿಸ್ತದೆ ಎಂದರಂತೆ. ಆಗ ಅನಂತ ಬಾವಯ್ಯನ ಅಣ್ಣ ಹಾಲು ಕೊಡಲು ಹೋಗಿದ್ದರು. ಮನೆಯವರೆಲ್ಲ ಗಡಿಬಿಡಿ ಮಾಡಿ, ಆಸ್ಪತ್ರೆಗೆ ಹೋಗುವ ಎಂದರು. ಅದಕ್ಕೆ ಅವರು ಇನ್ನು ಬದುಕುವುದು ನನ್ನ ಆಸೆ ಅಲ್ಲ. ಸಾವು ಸುಖಕರ. ಆದರೂ ಅಜ್ಜನನ್ನು ಉಳಿಸಬೇಕು ಎಂದು ನಿಮಗನಿಸಿದರೆ ಆಸ್ಪತ್ರೆಗೆ ಹೋಗುವ. ಆದರೆ ಮಗ ಬರಬೇಕು. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದ್ದು ಮಕ್ಕಳು ಮೊಮ್ಮಕ್ಕಳಲ್ಲ ಎಂದರಂತೆ. ಮೊಮ್ಮಗಳು ಹೋಗಿ ಡ್ರೆಸ್ ಎಲ್ಲ ತಂದಳು. ಇವರು ಶಾಲು ಹಾಕ್ಕೊಂಡರಂತೆ. ಶರ್ಟು ಮಗ ಬಂದ ಮೇಲೆ ಹಾಕುವ ಎಂದು, ಸ್ವಲ್ಪ ಮಲಗುತ್ತೇನೆ ಎಂದು ಮಲಗಿದರಂತೆ. ಮಲಗುತ್ತಲೇ, ಅಕೊಳ್ಳಿ ಈಗ ತಲೆಯೂ ತಂಪಾಗಲು ಶುರುವಾಯಿತು ಎಂದರಂತೆ. ಅಲ್ಲಿಗೆ ಮುಗಿಯಿತು.

ಇಡೀ ಜೀವನ ಯಾತನೆ ಪಟ್ಟು, ಫೋರ್ಸಿಬಲ್ ರೀತಿಯಲ್ಲಿ ಸಾವನ್ನು ಸ್ವೀಕರಿಸುವುದು ಬೇರೆ. ಕಾಯಿಲೆಯಿಂದ ಸುಸ್ತಾಗಿ ಜೀವನ ಸಾಕು ಎನಿಸುವುದು ಬೇರೆ. ಇದು ಹಾಗಲ್ಲ. ಜೀವನದುದ್ದಕ್ಕೂ ಪರಿಶ್ರಮ ಸಂತೋಷ ಎಲ್ಲವನ್ನೂ ಗಳಿಸಿ ಸಮೃದ್ಧವಾಗಿ ಬದುಕಿ ಆದರಿಸುವ ಪತ್ನಿ, ಮಗ, ಸೊಸೆ, ಮೊಮ್ಮಕ್ಕಳು ಎಲ್ಲರೂ ಇರುವಾಗ ಇನ್ನು ಸಾವು ಹೆಚ್ಚು ಸುಖಕರ ಎಂದು ಭಾವಿಸಿ ಯಾವ ಭಯ ಆತಂಕಗಳಿಲ್ಲದೆ ಹೊರಟು ಹೋಗುವುದು ಬೇರೆ. ಇಂಥ ಮನಸ್ಥಿತಿ ಹೇಗೆ ಬರಲು ಸಾಧ್ಯ ಎನ್ನುವುದು ನನಗಂತೂ ಹೊಳೆಯಲಿಲ್ಲ. ಬಹುಶಃ ಕಠೋಪನಿಷತ್ತನ್ನು ಪ್ರಜ್ಞಾಪೂರ್ವಕ ಅನುಸರಿಸಿದರೆ ಇದು ಸಾಧ್ಯವಾದೀತು. ಕಠೋಪನಿಷತ್‌ನ ಆಧಾರದಲ್ಲಿ ಇಂಗ್ಲೆಂಡಿನ ವಿದ್ವಾಂಸರೊಬ್ಬರು ‘ಮರಣ ರಹಸ್ಯ’ ಎಂದು ಮರಣದ ಸಹಜತೆಯನ್ನು ನಿರೂಪಿಸುವ ಪ್ರಬಂಧ ಬರೆದಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248